# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ-1210/2016/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:15.6.2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ಶ್ರೀ ಸಂಪಗಯ್ಯ ತಂದೆ ನಿಂಗಯ್ಯ, ವಾಸ: ನಿಂಗೇಗೌಡನದೊಡ್ಡಿ, ರಾಮನಗರ ತಾಲ್ಲೂಕು ಇವರು ಸಲ್ಲಿಸಿದ ದೂರಿನ ಕುರಿತು.

****

ಈ ದೂರನ್ನು ಶ್ರೀ ಸಂಪಗಯ್ಯ ವಾಸ: ನಿಂಗೇಗೌಡನದೊಡ್ಡಿ, ರಾಮನಗರ ತಾಲ್ಲೂಕು (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ ರಮೇಶ, ಗ್ರಾಮ ಲೆಕ್ಕಿಗರು, ಕಂದಾಯ ನಿರೀಕ್ಷಕರು, ಬಿಡದಿ ಹೋಬಳಿ, ಆರ್.ಆರ್.ಟಿ. ಶಿರಸ್ತೇದಾರರು, ತಾಲ್ಲೂಕು ಕಛೇರಿ, ತಹಶೀಲ್ದಾರರು, ತಾಲ್ಲೂಕು ಕಛೇರಿ, ಕಂಪ್ಯೂಟರ್ ಆಪರೇಟರ್, ಆರ್.ಆರ್.ಟಿ. ವಿಭಾಗ, ರಾಮನಗರ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.9ರಡಿಯಲ್ಲಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ಸರ್ವೆ ನಂ.51/1 ರಲ್ಲಿ 3 ಎಕರೆ 20 ಗುಂಟೆ ನನ್ನ ಹೆಂಡತಿ ಶ್ರೀಮತಿ ಟಿ. ಅನೀತಾ ಇವರ ಹೆಸರಿನಲ್ಲಿ ಇರುವುದರನ್ನು ಬೇರೆಯವರ ಹೆಸರಿಗೆ ಮಾಡಿ ಕೊಟ್ಟಿರುತ್ತಾರೆ. ಯಾವುದೇ ಆದೇಶವಿಲ್ಲದೇ ಕಾಲಂ ನಂ.11 ರಲ್ಲಿ ಸರ್ವೋಚ್ಛ ನ್ಯಾಯಾಲಯದ ಎಸ್.ಎಲ್.ಪಿ (ಸಿವಿಲ್) 1910/2012 ರಲ್ಲಿ ತಡೆಯಾಜ್ಞೆ ಇದೆ ಅಂತ ನಮೂದಿಸಿದ್ದಾರೆ. ನಾವು ಕೇಳಲು ಹೋದರೆ ಸಮಂಜಸ ಉತ್ತರ ನೀಡುತ್ತಿಲ್ಲ. ಇದರಿಂದಾಗಿ ನನಗೆ ತುಂಬಾ ತೊಂದರೆ ಆಗಿದೆ. ನನ್ನ ಜಮೀನಿನ ಕಿಮ್ಮತ್ತು ಕಡಿಮೆ ಆಗಿದೆ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಭೂಮಿ ಕೇಂದ್ರದಲ್ಲಿ ಪರಿಶೀಲಿಸಿದಾಗ ಕಂಪ್ಯೂಟರ್ ತಂತ್ರಾಂಶದ ಕಾಲಂ 11 ರಲ್ಲಿ ಯಾವುದೇ ಆದೇಶವು ಕಾಣಿಸುವುದಿಲ್ಲ. ಆದರೆ, ಆರ್.ಟಿ.ಸಿ ಪ್ರತಿಯನ್ನು ಪಡೆದಾಗ ಆದೇಶವು ಕಾಣಿಸುತ್ತಿದೆ. ಇದು ತಾಂತ್ರಿಕ ತೊಂದರೆ ಆಗಿದ್ದು ಮ್ಯಾನಿಟರಿಂಗ್ ಸೆಲ್ ರವರಿಗೆ ದೂರು ನೀಡಿ ಆದೇಶವು ಭೂಮಿ ತೆರೆಯಲ್ಲಿ ಕಾಣಿಸಿಕೊಳ್ಳುವಂತೆ ಮಾಡಲಾಗಿದೆ. ನ್ಯಾಯಾಲಯದ ಆದೇಶವನ್ನು ಕಾಲಂ ನಂ.11 ರಲ್ಲಿ ತೆಗೆಯಲು ಅವಕಾಶ ಇದೆ. ಆದ್ದರಿಂದ ನಡುವಳಿಯನ್ನು ನಡೆಸಿ ಭೂಮಿ ತಂತ್ರಾಂಶದಲ್ಲಿ ಅಳವಡಿಸಿಕೊಳ್ಳಲು ತಡವಾಗುತ್ತಿದೆ ಅಂತ ತಿಳಿಸಿದ್ದಾರೆ.

4. 2 ರಿಂದ 5ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ 1ನೇ ಎದರುದಾರರ ಆಕ್ಷೇಪಣೆಗಳನ್ನು ಅಳವಡಿಸಿಕೊಂಡಿರುತ್ತಾರೆ.

5. ಎದುರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರರು ಬೇಜವಾಬ್ದಾರಿತನವನ್ನು ತೋರಿಸುತ್ತಿದ್ದಾರೆ. ಬೇರೆ ಯಾವುದೇ ಪಹಣಿಯಲ್ಲಿ ಆಗದಿರುವ ತಪ್ಪು ನಮ್ಮ ಪಹಣಿಯಲ್ಲಿ ಮಾತ್ರ ಏಕೆ ಆಗಿದೆ, ಇದುವರೆಗೆ ಎದುರುದಾರರು ಯಾವುದೇ ಕ್ರಮ ವಹಿಸಿಲ್ಲ. ಕಾಲಂ ನಂ.11 ರಲ್ಲಿ ಮಾರ್ಪಾಡು ಮಾಡಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ತೆಗೆದುಕೊಳ್ಳಲು ಕೋರಿರುತ್ತಾರೆ.

6. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಭೂಮಿ ತಂತ್ರಾಂಶದಲ್ಲಿ, ಆರ್.ಟಿ.ಸಿ. ಕಾಲಂ 11 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ತೆರೆಯ ಮೇಲೆ (ಕಂಪ್ಯೂಟರ್ ಸ್ಕ್ರೀನ್ ಮೇಲೆ) ಕಾಣುತ್ತಿಲ್ಲ ಆದರೆ ಪ್ರತಿಯನ್ನು ತೆಗೆದುಕೊಂಡಾಗ ಕಾಣಿಸುತ್ತದೆ, ಈ ಬಗ್ಗೆ ತಾಂತ್ರಿಕವಾಗಿ ಕ್ರಮ ವಹಿಸಬೇಕಾಗುತ್ತದೆ ಅಂತ ಎದುರುದಾರರು ತಿಳಿಸಿದ್ದಾರೆ. ದೂರುದಾರರ ಪ್ರಕಾರ ಯಾವುದೇ ಎಸ್.ಎಲ್.ಪಿ. ನಲ್ಲಿ ತಡೆಯಾಜ್ಞೆ ಆದೇಶವಾಗಿಲ್ಲ ಅಂತ ಹೇಳುತ್ತಿದ್ದಾರೆ, ಆದರೂ ಸಹ ನೆಟ್ ನಲ್ಲಿ ಪರಿಶೀಲಿಸಲಾಗಿ ಸದರಿ ಎಸ್.ಎಲ್.ಪಿ. ನರಸಮ್ಮ ವಿರುದ್ಧ ಸಾಕಮ್ಮ ಎನ್ನುವ ಪ್ರಕರಣವಾಗಿದೆ. ಎದುರುದಾರರು ಸಹ ಅದನ್ನು ತೆಗೆದು ಹಾಕಲು ಕ್ರಮವಹಿಸಲಾಗುವುದು ಅಂತ ತಿಳಿಸಿದ್ದಾರೆ. ಕಾಲಂ 11 ರ ಆರ್.ಟಿ.ಸಿ. ನಲ್ಲಿ ಬರುತ್ತಿರುವ ನಮೂದನ್ನು ಭೂಮಿ ತಂತ್ರಾಂಶವನ್ನು ಅಳವಡಿಸಿ ಮೂಟೇಷನ್ ನಡವಳಿಯನ್ನು ನಡೆಸಿ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುವಂತೆ

ನಿರ್ದೇಶಿಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರಿಗೆ ನಿರ್ದೇಶನ ನೀಡಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 15/6/17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.